2) ಸುಳ್ಯನಗರಕ್ಕೆ ಕುಡಿಯುವ ನೀರೋದಗಿಸುವ ಯೋಜನೆಯ ಕಾಮಗಾರಿ

ಶ್ರೀ ಕೆ. ಕುಶಾಲ (ಸುಳ್ಯ) ಮಾನ್ಯ ಅಧ್ಯಕ್ಷರೇ

ಸುಳ್ಯ ತಾಲೂಕಿನ ಸುಳ್ಯನಗರಕ್ಕೆ ಕರ್ನಾಟಕ ನಗರ ನೀರು ಸರಬರಾಜು ಯೋಜನೆಯಲ್ಲಿ 1985ರಲ್ಲಿ ಸುಮಾರು 40 ಲಕ್ಷ ರೂಪಾಯಿ ಮಂಜೂರಾತಿ ಯೊಂದಿಗೆ ಕೆಲಸ ಪ್ರಾರಂಭಿಸಿರುತ್ತದೆ. ಈ ಯೋಜನೆಯಲ್ಲಿ ಕೇವಲ ಮಣ್ಣಿನಲ್ಲಿ ನೀರಿನ ಪೈಪನ್ನು ಮಾತ್ರ ಹೂಳಲಾಗಿದೆ. ಈ ಯೋಜನೆಯಂತೆ ಸರಿಯಾದ ನೀರಿನ ಟ್ಯಾಂಕ್ ರಚನೆ ನೀರಿನ ಪಂಪುಸೆಟ್ಟು. ಮೋಟಾರು ಹಾಗೂ ಓವರ್ ಹೆಡ್ ಟ್ಯಾಂಕ್ ರಚನೆಯ ಕೆಲಸವನ್ನು ಕಳೆದ 6 ವರ್ಷದಿಂದಲೂ ಪ್ರಾರಂಭಿಸಿರುವುದಿಲ್ಲ. 40 ಲಕ್ಷ ಮಂಜೂರಾತಿ ಅಲ್ಲದೆ ಹರಿಜನ ವಿಶೇಷ ಘಟಕ ಯೋಜನೆಯಲ್ಲಿ ಕೂಡಾ ಸುಮಾರು 20 ಲಕ್ಷ ರೂಪಾಯಿ ಈ ಯೋಜನೆಗೆ ಮಂಜೂರಾತಿ ಆದಂತೆ ಕಾಮಗಾರಿಯನ್ನು ಮಾಡಲಾಗಿದೆ. ಆದರೆ ಈ ತನಕ ಕೇವಲ ಪೈಪನ್ನು ಮಾತ್ರ ಮಣ್ಣಿನ ಅಡಿಯಲ್ಲಿ ಅಳವಡಿಸಲಾಗಿದೆ. ನೀರು ಸರಬರಾಜು ಯೋಜನೆಯಂತೆ 1/2 ಇಂಚು 1 ಇಂಚುಗಳ ಪೈಪನ್ನು ಹಾಕಬಾರದು (ಅಳವಡಿಸಬಾರದು) ಎಂದು ಇದ್ದರೂ, ಅಳವಡಿಸಲಾಗಿದೆ.

ಕಳೆದ 6 ವರ್ಷದಿಂದ ಪೈಪುಗಳನ್ನು ಅಳವಡಿಸುವ ಕೆಲಸವನ್ನು, ಸುಲಭದಲ್ಲಿ ಕಮಿಶನ್ ಹೊಡೆಯುವ ಇರಾದೆಯಿಂದ, ಮಂಗಳೂರು ಇಲಾಖಾ ಕಾರ್ಯಕಾರೀ ಅಭಿಯಂತರರು, ಹಾಗೂ ಮಂಡಲ ಪ್ರಧಾನರು ಶಾಮಿಲಾಗಿ ಈ ಕೆಲಸವನ್ನು ಮಾಡಿರುವುದು ತಿಳಿದು ಬರುತ್ತದೆ. ಇನ್ನು ಉಳಿದ ಕೆಲವು ಕಟ್ಟಿದ ಟ್ಯಾಂಕ್‌ಗಳು ಸಂಪೂರ್ಣ ಒಡೆದುಹೋಗಿರುತ್ತದೆ. ಮತ್ತು ಪೈಪುಗಳು ಮಣ್ಣಿನ ಅಡಿಯಲ್ಲಿ ಬೇಕಷ್ಟು ಆಳದಲ್ಲಿ ಹಾಕದೆ ಒಡೆದು ಹೋಗಿರುತ್ತವೆ. ಮತ್ತು ಈ ಯೋಜನೆಗೆ ಮುಖ್ಯವಾಗಿ ಆಗಬೇಕಾದ ಓವರ್ ಹೆಡ್ ಟ್ಯಾಂಕು ಪಂಪುಶೆಡ್ಡು ಮೋಟಾರು ಇನ್ನು ಅಳವಡಿಸಿರುವುದಿಲ್ಲ. ಈ ಟ್ಯಾಂಕು ಪಂಪುಸೆಟ್ಟು, ಮೋಟಾರು ಖರೀದಿಯಲ್ಲಿ ಹೆಚ್ಚಿನ ಕಮಿಶನ್ನು ಬರುತ್ತಿಲ್ಲವೆಂದು ಕೆಲಸವನ್ನು ಮಂಜೂರಾತಿ ದೊರೆತು ತಿಂಗಳು ಕಳೆದರೂ ಪ್ರಾರಂಭಿಸಿರುವುದಿಲ್ಲ. ಕೆಲವು ರಚನೆಗೊಂಡ ಟ್ಯಾಂಕಿಗೆ ಪ್ರಯೋಗಿಕವಾಗಿ ನೀರನ್ನು ಬಿಡುವ ಪೈಪುಗಳಲ್ಲಿ ಕೂಡಾ ಪ್ರಾಯೋಗಿಕ ನೀರು ಬಿಟ್ಟು, ಪರಿಶೀಲಿಸುತ್ತಿಲ್ಲ. ಕಾರಣ ಈ ಟ್ಯಾಂಕಿ - ಹಾಗೂ ಪೈಪುಗಳು ಕೆಟ್ಟು ಹೋಗಿವೆ.

ಸದ್ರಿ ಇಲಾಖಾ ಕಾರ್ಯಕಾರೀ ಅಭಿಯಂತರರು ಮಂಗಳೂರು ಇವರು, ಕಳೆದ 6 ರಂದು ಎಲ್ಲಾ ಕೆಲಸವನ್ನು ಒಬ್ಬನೇ ಕಂಟ್ರಾಕ್ಟ್‌ದಾರನಿಗೆ ನೀಡಲಾಗಿದೆ. ಇಲಾಖೆ ಎಲ್ಲಾ ಕೆಲಸವನ್ನು ಈ ಒಬ್ಬನೇ ಕಂಟ್ರಾಕ್ಟರಿಗೆ ನೀಡಲಾಗಿರುವುದರಿಂದ ಕೆಲಸ ಪೂರೈಸುತ್ತಿಲ್ಲ ಎಂದು ಕೂಡಾ ತಿಳಿದು ಬರುತ್ತದೆ.

ಸದರಿ ಕಾಮಗಾರಿಯನ್ನು ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ತಿಗೆ ಬಿಟ್ಟು ಕೊಡಲು ಸರಕಾರ ತಯಾರಿದ್ದೂ, ಈ ಕಾರ್ಯಕಾರೀ ಅಭಿಯಂತರರು, ಹಾಗೂ ಮಂಡಲ ಪ್ರಧಾನರ ಸ್ಥಾಪಿತ ಹಿತಾಸಕ್ತಿಯಿಂದ ಹಣದ ಕಮಿಶನ್ ಪಡೆಯುವ ಇರಾದೆಯಿಂದ ಇವರು ಬಿಟ್ಟು ಕೊಡುತ್ತಿಲ್ಲ.

ಆದುದರಿಂದ ಈ ಕುರಿತು ಕೂಡಲೇ ಪರಿಶೀಲನೆಯಿಂದ ಕ್ರಮ ಕೈಗೊಳ್ಳುವುದು ಹಾಗೂ ಕುಡಿಯುವ ನೀರಿನ ಅಭಾವವನ್ನು ತಪ್ಪಿಸಲು ಎಲ್ಲಾ ಕಾಮಾಗಾರಿಗಳನ್ನು ಕೂಡಲೇ ಕೈಗೆತ್ತಿಕೊಂಡು ಮುಗಿಸುವಂತೆ ಮಾಡಬೇಕಾಗಿ ಸರಕಾರವನ್ನು ಈ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಕೆ.ಜೆ. ಜಾರ್ಜ್ (ನಗರಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೇ, ತಮ್ಮ ಅಪ್ಪಣೆ ಪಡೆದು ಈ ಕೆಳಕಂಡ ಹೇಳಿಕೆಯನ್ನು ಮಾಡುತ್ತಿದ್ದೇನೆ.

ಸುಳ್ಯ ನಗರಕ್ಕೆ ಕೊಳವೆ ನೀರು ಸರಬರಾಜು ಯೋಜನೆಯಲ್ಲಿ 26.00 ಲಕ್ಷ ರೂ.ಗಳ ಅಂದಾಜಿನಲ್ಲಿ ಕುಡಿಯುವ ನೀರಿನ ಯೋಜನೆಯನ್ನು ಸರ್ಕಾರದವರು ಅಜ್ಜಿ

ಸಂಖ್ಯೆ: ಹೆಚ್.ಯು.ಡಿ :16 : ಯುಡಬ್ಲ್ಯು.ಎಸ್: 85 ದಿನಾಂಕ: 18.6.85ರಲ್ಲಿ ಮಂಜೂರಾತಿ ನೀಡಿತು. ಈ ಯೋಜನೆಯನ್ನು ತಾಂತ್ರಿಕ ದೃಷ್ಟಿಯಿಂದ ಹಾಗೂ ಕೆಲವು ಹೆಚ್ಚಿನ ಕಾಮಗಾರಿಯನ್ನು ಸೇರಿಸಿ 48.50 ಲಕ್ಷ ರೂ.ಗಳಿಗೆ ಪರಿಷ್ಕೃತ ಅಂದಾಜನ್ನು ತಯಾರಿಸಲಾಗಿ, ಈ ಅಂದಾಜಿಗೆ ಸರ್ಕಾರದ ಆಡಳಿತಾತ್ಮಕ ಮಂಜೂರಾತಿ ಸರ್ಕಾರದ ಆಜ್ಞೆ: ಹೆಚ್.ಯು.ಡಿ: ೩ ಯುಡಬ್ಲ್ಯು.ಎಸ್.: 89 ದಿನಾಂಕ: 21.11.1988ರಲ್ಲಿ ಜಾರಿಕಿದೆ.

ಪರಿಷ್ಕೃತ ಅಂದಾಜನ ಪ್ರಕಾರ ಕೆಳಗೆ ಕಾಣಿಸಿರುವ ಕಾಮಗಾರಿ ಕೆಲಸಗಳನ್ನು ಮುಗಿಸಲಾಗಿರುತ್ತದೆ.

ಅ) ಘಟಕ ಶೇಖರಣಾಗಾರಕ್ಕೆ ಪೂರಕ ಕೊಳವೆ;

ಆ) 90 ಎಂಎಂ ಪಿವಿಸಿ ವಿತರಣೆ ಕೊಳವೆಗಳನ್ನು ಅಳವಡಿಸುವುದು;

ಇ) 160 ಮಿ.ಮಿ. ವ್ಯಾಸದ ಕೊಳವೆ ಅಳವಡಿಸುವುದು;

ಈ) 250 ಮಿ.ಮಿ. ಬೀಡು ಕಬ್ಬಿಣದ ಕೊಳವೆ ಅಳವಡಿಸುವುದು;

ಉ) 250 ಮಿ.ಮಿ. ಬೀಡು ಕಬ್ಬಿಣದ ಕೊಳವೆಗಳಿಗೆ ತಡೆಗೋಡೆ ನಿರ್ಮಿಸುವ ಕೆಲಸ.

2. 2.50 ಲಕ್ಷ ಲೀಟರ್ ಸಾಮರ್ಥ್ಯದ ನೆಲಮಟ್ಟದ ನೀರು ಸಂಗ್ರಹಣಾಗಾರದ ಕೆಲಸ ಮುಗಿದಿದೆ.

3. ಸಿಲೋನ್ ನಿರಾಶ್ರಿತ ಪ್ರದೇಶದಲ್ಲಿ 15,000 ಲೀಟರ್ ಸಾಮರ್ಥ್ಯದ ತೊಟ್ಟಿ ಮತ್ತು ಪಂಪ್ ಕೆಲಸವನ್ನು ಮುಗಿಸಿದೆ.

4. ಸುಳ್ಯ ನಗರದಲ್ಲಿ ವಿಶೇಷ ಘಟಕ ಯೋಜನೆಯ ಅಡಿಯಲ್ಲಿ ಅರ್ಧ ಇಂಚು ಮತ್ತು ಒಂದು ಇಂಚು ಕೊಳವೆಗಳನ್ನು ಅಳವಡಿಸಿರುವುದಿಲ್ಲ.

ಸದರಿ ಯೋಜನೆಗೆ ಸಂಬಂಧಪಟ್ಟ ಉಳಿದ ಎಲ್ಲಾ ಕೆಲಸಗಳನ್ನು 1992ನೇ ವರ್ಷದ ಅಂತ್ಯದೊಳಗೆ ಮುಗಿಸಲು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು.

3) ಮೈಸೂರು ಸಕ್ಕರೆ ಕಾರ್ಖಾನೆಯು ಲಾಭಗಳಿಸಿರುವುದರಿಂದ ರೈತರಿಗೆ ಬೋನಸ್ ಪ್ರಕಟಿಸಿರುವುದು.

ಶ್ರೀ ಎಂ.ಎಸ್.ಆತ್ಮಾನಂದ: ಮಾನ್ಯ ಅಧ್ಯಕ್ಷರೇ,

ಮಂಡ್ಯದಲ್ಲಿರುವ ಮೈಸೂರು ಸಕ್ಕರೆ ಕಾರ್ಖಾನೆಯು 1989-90ನೇ ಸಾಲಿನಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಿ ಸುಮಾರು ಐದು ಲಕ್ಷ ಟನ್ನಿನಷ್ಟು ಕಬ್ಬನ್ನು ಅರೆದಿದೆ. ಈ ಸಾಲಿನಲ್ಲಿ ಸಕ್ಕರೆ ಕಾರ್ಖಾನೆಯು ಅಧಿಕ ಲಾಭವನ್ನು ಗಳಿಸಿದೆ. ಮಂಡ್ಯ ಜಿಲ್ಲೆಯಲ್ಲಿನ ಉಳಿದ ಸಕ್ಕರೆ ಕಾರ್ಖಾನೆಗಳು ಉತ್ತಮವಾಗಿ ಕಾರ್ಯನಿರ್ವಹಿಸಿ, ಅಧಿಕ ಲಾಭವನ್ನು ಗಳಿಸಿ, ಲಾಭಾಂಶದಲ್ಲಿ ರೈತರುಗಳಿಗೆ - ಬೋನಸ್ ಹಣವನ್ನು ಪ್ರೋತ್ಸಾಹಕರ ರೀತಿಯಲ್ಲಿ ಕೊಟ್ಟಿದ್ದಾರೆ. ಆದರೆ, ಮಂಡ್ಯದಲ್ಲಿರುವ ಮೈಸೂರು ಸಕ್ಕರೆ ಕಾರ್ಖಾನೆಯ ಆಡಳಿತ ಮಂಡಳಿ ಈ ಕಾರ್ಖಾನೆಯ ವ್ಯಾಪ್ತಿಯಲ್ಲಿ ಬರುವ ರೈತರಿಗೆ ಯಾವುದೇ ರೀತಿಯ ಬೋನಸ್ ಹಣವನ್ನು ಈವರೆವಿಗೆ ಕೊಟ್ಟಿರುವುದಿಲ್ಲ. ಇದರಿಂದ ರೈತರಿಗೆ ನಿರಾಸೆಯಾಗಿದೆ. ಬೋನಸ್ ಹಣದ ಪಾವತಿಗಾಗಿ ಆಡಳಿತಮಂಡಳಿಗೆ ಅನೇಕ ಬಾರಿ ಮನವಿ ಮಾಡಿದ್ದಾಗ್ಯೂ ಈವರೆಗೆ ಯಾವುದೇ ರೀತಿಯ ಫಲ ಸಿಕ್ಕಿರುವುದಿಲ್ಲ. ಆದುದರಿಂದ ರೈತರಿಗೆ ಬೋನಸ್ ಹಣ ನೀಡುವ ಬಗೆಗೆ ಶೀಘ್ರ ನಿರ್ಣಯ ಕೈಗೊಂಡು ರೈತರಿಗೆ ಬೋನಸ್ ಹಣ ಕೊಡಿಸಿ ಕೊಡಬೇಕೆಂದು ಈ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಯವರ ಪರವಾಗಿ): ಮೈಸೂರು ಸಕ್ಕರೆ ಕಾರ್ಖಾನೆಯ 1989-90ನೇ ಸಾಲಿನ ಲೆಕ್ಕ ಪರಿಶೋಧನೆಯು ಇನ್ನು ಮುಗಿದಿಲ್ಲವ